**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 22-07-2025:**

**1ನೇ ಆರೋಪಿತರ ಪರ ಪಾಟೀಸವಾಲು ಶ್ರೀ ಎ ಹೆಚ್ ಬಿ ವಕೀಲರಿಂದಃ**

ನಿಪಿ-54 ರಿಂದ 61ರಲ್ಲಿ ಯಾರು ಖಾತೆದಾರರು ಎನ್ನುವ ಬಗ್ಗೆ ದಾಖಲೆಗಳು ಇಲ್ಲ ಎಂದರೆ ನಿಜ. ಸಾಮಾನ್ಯವಾಗಿ ಖಾತೆದಾರರ ಹೆಸರು ಮತ್ತು ಇತರ ವಿವರಗಳು ಇರುತ್ತವೆ ಎಂದರೆ ನಿಜ. ಅದು ಯಾವ ವಿಧದ ಖಾತೆ ಎಂದು ಕಂಡುಬರುವುದಿಲ್ಲ ಎಂದರೆ ಸಾಕ್ಷಿಯು ಅದು ಕ್ಯಾಷ್ ಕ್ರೆಡಿಟ್ ಸಾಲದ ಖಾತೆ ಎನ್ನುತ್ತಾರೆ. ಎನ್ ಎಸ್ ಮೆಡಿಕಲ್ಸ್ ಗೆ ಪಾಲುದಾರರಿದ್ದರೋ ಅಥವಾ ಅದರ ಅಧಿಕೃತ ಸಹಿದಾರರು ಯಾರು ಎಂದು ನಮೂದನೆ ಇಲ್ಲ ಎಂದರೆ ನಿಜ. ನನಗೆ 1-1-2018ರಿಂದ 14-1-2018ರವರೆಗಿನ ಡಿಡಿಗಳನ್ನು ಕೊಡುವಂತೆ ಕೋರಿಕೆ ಸಲ್ಲಿಸಿದ್ದರು. ಅದಕ್ಕಿಂತ ಹಿಂದೆ ಅಥವಾ ನಂತರದಲ್ಲಿ ಡಿಡಿ ಪಡೆದಿದ್ದರೇ ಎನ್ನುವ ಬಗ್ಗೆ ಮಾಹಿತಿ ನನಗೆ ಇಲ್ಲ.

ಡಿಡಿಯನ್ನು ಯಾರ ಹೆಸರಿನಲ್ಲಿ ಯಾರು ಬೇಕಾದರೂ ತೆಗೆದುಕೊಳ್ಳಬಹುದು ಎಂದರೆ ಸಾಕ್ಷಿಯ ಡಿಡಿ ಪಡೆಯುವವರು ಚಲನ್ ಗೆ ಸಹಿ ಹಾಕಬೇಕು ಎನ್ನುತ್ತಾರೆ. ನಿಪಿ-56 ಮತ್ತು 57ರ ಚಲನ್ ನಲ್ಲಿ ಅವರ ಸಹಿ ಇಲ್ಲ ಎಂದರೆ ಸಾಕ್ಷಿಯು ಸಹಿ ಇದೆ, ಆದರೆ ಯಾರದೆಂದು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಯಾರು ಬೇಕಾದರೂ ಹಣ ತುಂಬಿ ಇಂತಹವರ ಹೆಸರಿನಲ್ಲಿ ಡಿಡಿ ಕೊಡಿ ಎಂದು ಕೇಳಿದರೆ ಕೊಡುತ್ತೇವೆ ಎಂದರೆ ಸಾಕ್ಷಿಯು ಮಿತಿಯ ಒಳಗಡೆ ಇದ್ದರೆ ಕೊಡುತ್ತೇವೆ ಎನ್ನುತ್ತಾರೆ. ಪೊಲೀಸರ ಕೋರಿಕೆಯ ಮೇರೆಗೆ ಅವರಿಗೆಬೇಕಾಗುವಂತೆ ದಾಖಲೆಗಳನ್ನು ನೀಡಿರುತ್ತೇವೆ ಎಂದರೆ ಸಾಕ್ಷಿಯು ಅವರು ಕೇಳಿದಂತೆ ಕೊಟ್ಟಿರುತ್ತೇವೆ ಎನ್ನುತ್ತಾರೆ.

**ಪಾಟೀಸವಾಲುಃ 2ನೇ ಆರೋಪಿ ಪರ ಶ್ರೀ ಜೆ ಎಸ್ ವಕೀಲರಿಂದಃ**

(1ನೇ ಆರೋಪಿತರ ಪರ ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ).

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**